**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ಈ ದಿನ ನಾನು ಮಾನ್ಯ ನ್ಯಾಯಾಲಯಕ್ಕೆ ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

| | |
|---|---|
| ನಿಡಿ.2 | ದಾವಾ ಆಸ್ತಿಗೆ ಸಂಬಂಧಿಸಿದ ಋಣಭಾರ ರಾಹಿತ್ಯ ಪ್ರಮಾಣಪತ್ರ |
| ನಿ.ಡಿ.3 | ಕುಮಾರಿ ಲಕ್ಷ್ಮಿ ವಿಠ್ಠಲ ಸನದಿ ಇವಳ ಶಾಲಾ ವರ್ಗಾವಣೆ ಪ್ರಮಾಣಪತ್ರ |
| ನಿಡಿ.1(ಎ) | ನಿಡಿ1 ರಲ್ಲಿರುವ ಸಾಕ್ಷಿಯ ಸಹಿ |

**ಪಾಟೀ ಸವಾಲುಃ- ವಾದಿ ಪರ ಶ್ರೀ. ಎಸ್. ಎಮ್ ಹೆಚ್ ವಕೀಲರಿಂದಃ-**

ನಾನು ಶಾಲೆಗೆ ಹೋಗಿಲ್ಲ. ನನಗೆ ಓದಲು- ಬರೆಯಲು ಬರುವುದಿಲ್ಲ. ನನಗೆ ಸಹಿ ಹಾಕಲು ಬರುತ್ತದೆ. ನನಗೆ ಮೂರು ಜನ ಗಂಡು ಮಕ್ಕಳು. ಅವರೆಂದರೆ 2 ರಿಂದ 4 ನೇ ಪ್ರತಿವಾದಿಯರು ಇರುತ್ತಾರೆ. 2 ನೇ ಪ್ರತಿವಾದಿ ಸರಿಯಾಗಿ ಶಾಲೆ ಕಲಿತಿಲ್ಲ. ಆತನಿಗೆ ಸರಿಯಾಗಿ ಮಾತನಾಡಲು ಬರುವುದಿಲ್ಲ. ಆತನಿಗೆ ಬರೆಯಲು ಬರುತ್ತದೆ ಆದರೆ ಓದಲು ಬರುವುದಿಲ್ಲ. 3 ನೇ ಪ್ರತಿವಾದಿ 7 ನೇ ತರಗತಿಯವರೆಗೆ ಓದಿರುತ್ತಾನೆ. ಆತನಿಗೆ ಓದಲು ಬರೆಯಲು ಬರುತ್ತದೆ. 4 ನೇ ಪ್ರತಿವಾದಿಯು ಸಹ 6 ನೇ ತರಗತಿಯವರೆಗೆ ಓದಿರುತ್ತಾನೆ. ನನ್ನ ಮೂರು ಜನ ಮಕ್ಕಳು ಅಂದರೆ 2 ರಿಂದ 4 ನೇ ಪ್ರತಿವಾದಿಯರು ಎಲ್ಲರೂ ಸಹಿ ಮಾಡುತ್ತಾರೆ. 2 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾನೆಂದರೆ ಸಾಕ್ಷಿಯು ಸಹಿ ಮಾಡುತ್ತಾನೆಂದು ನುಡಿಯುತ್ತಾರೆ.

ನಮ್ಮ ಕುಟುಂಬದ ಹಿರಿತನವನ್ನು ನಾನೇ ಮಾಡುತ್ತೇನೆ. ನಮ್ಮ ಮನೆಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನು ನಾನೇ ಮಾಡುತ್ತಾ ಬಂದಿರುತ್ತೇನೆ. ಮಕ್ಕಳಗೇರಿ ಗ್ರಾಮದಲ್ಲಿ ನನ್ನ ಕುಟುಂಬಕ್ಕೆ ಸುಮಾರು 11 ಎಕರೆ ಜಮೀನು

ಇರುತ್ತದೆ. ದಾವಾ ಆಸ್ತಿ 03 ಎಕರೆ 10 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ 171/1 ನೇದ್ದರಲ್ಲಿ 06 ಎಕರೆ 26 ಗುಂಟೆ ಜಮೀನು ಇರುತ್ತದೆಂದರೆ ನಿಜ. ನನ್ನ ಕುಟುಂಬಕ್ಕೆ ಇವೆರಡು ಜಮೀನುಗಳನ್ನು ಹೊರತುಪಡಿಸಿ ಬೇರೆ ಜಮೀನುಗಳು ಇರುವುದಿಲ್ಲ. ನನಗೆ ಒಬ್ಬಳು ಮಗಳು ಇರುತ್ತಾಳೆಂದರೆ ನಿಜ. ನಾನು , ನನ್ನ ಹೆಂಡತಿ ಮಕ್ಕಳು ಎಲ್ಲರೂ ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ. ನಮ್ಮ ಕುಟುಂಬದ ಪಡಿತರ ಚೀಟಿ ಹಾಗೂ ಚುನಾವಣಾ ಗುರುತಿನ ಚೀಟಿ ಒಂದೇ ಮನೆಯಲ್ಲಿ ವಾಸವಾಗಿರುವ ಬಗ್ಗೆ ಇರುತ್ತವೆ. ನಾವು ಇವತ್ತಿಗೂ ಸಹ ಎಲ್ಲರೂ ಒಟ್ಟಿಗೆ ವಾಸವಾಗಿದ್ದೇವೆ. ನನ್ನ ಮತ್ತು ನನ್ನ ಮಕ್ಕಳ ಮದ್ಯೆ ಇವತ್ತಿಗೂ ಸಹ ಪಾಲು ವಾಟ್ನಿಯಾಗಿರುವುದಿಲ್ಲ.

ದಾವೆ ಖರೀದಿ ಕರಾರು ಪತ್ರ ಬರೆದುಕೊಡುವುದಕ್ಕಿಂತ ಮುಂಚೆ ಎಲ್ಲಾ ಜಮೀನುಗಳು ನನ್ನ ಹೆಸರಿಗೆ ಇದ್ದವು ಎಂದರೆ ನಿಜ. ಪ್ರಸ್ತುತ ನನ್ನ ಹೆಸರನ್ನು ಕಡಿಮೆ ಮಾಡಿ ನನ್ನ ಮೂರು ಜನ ಗಂಡು ಮಕ್ಕಳ ಹೆಸರಿಗೆ ಆಸ್ತಿಗಳನ್ನು ಮಾಡಿರುತ್ತೇನೆಂದರೆ ನಿಜ. ತಲಾಟಿರವರ ಕಚೇರಿಯಲ್ಲಿ ಬಾಂಡ ಬರೆದುಕೊಡುವ ಮೂಲಕ ನನ್ನ ಹೆಸರಿಗೆ ಇದ್ದ ಆಸ್ತಿಗಳನ್ನು ನನ್ನ ಮೂರು ಜನ ಗಂಡು ಮಕ್ಕಳ ಹೆಸರಿಗೆ ವರ್ಗಾವಣೆ ಮಾಡಿರುತ್ತೇನೆ. ಸಾಕ್ಷಿಗೆ ಸದರಿ ದಾಖಲೆಯ ದೃಡಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ಮುಖಾಭೀಲೆಯಾಗಿ ನಿಪಿ.23 ಎಂದು ಗುರುತಿಸಲಾಯಿತು. ಸದರಿ ನಿಪಿ.23 ರಂತೆ ನಾನು ಮತ್ತು ನನ್ನ ಮೂರು ಜನ ಗಂಡು ಮಕ್ಕಳು ಅಪಸಾತ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದು ಹೇಳಿ ನೋಟರಿ ಮಾಡಿಸಿ ಅದರ ಆಧಾರದ ಮೇರೆಗೆ ಅದನ್ನು ಮೂರು ಜನ ಗಂಡು ಮಕ್ಕಳು ಹೆಸರುಗಳನ್ನು ದಾಖಲು ಮಾಡಿಸಿರುತ್ತೇನೆಂದರೆ ನಿಜ. ನಿಪಿ.23 ನ್ನು ಯಾವ ಕಾರಣಕ್ಕಾಗಿ ಮಾಡಿರುತ್ತೀರಿ?

ಎಂದರೆ ಸಾಕ್ಷಿಯು ನನ್ನ ಗಂಡುಮಕ್ಕಳು ನನ್ನ ಮಾತನ್ನು ಕೇಳದೇ ಇದ್ದ ಕಾರಣ ಅವರ ಹೆಸರಿಗೆ ಜಮೀನು ಮಾಡಿರುತ್ತೇನೆ. ನನ್ನ ಮೂರು ಜನ ಗಂಡು ಮಕ್ಕಳ ಮದುವೆಯಾಗಿರುತ್ತದೆ. ಮೃತ ಸುಭಾಸ ಕಪ್ಪಲಗುದ್ದಿ ಇವರಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರಕ್ಕೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ.23 ರಂತೆ ಸುಳ್ಳು ಅಪಸಾತ ವಾಟ್ನಿ ಪತ್ರವನ್ನು ಸೃಷ್ಟಿಸಿಕೊಂಡು ನನ್ನ ಹೆಸರನ್ನು ಕಡಿಮೆ ಮಾಡಿ ನನ್ನ ಮಕ್ಕಳ ಹೆಸರಿಗೆ ಜಮೀನುಗಳನ್ನು ವರ್ಗಾವಣೆ ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನನ್ನ ಮಕ್ಕಳ ಹೆಸರಿಗೆ ವರ್ಗಾವಣೆ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಮೇಲೆ ಹೇಳಿದ ಮಕ್ಕಳಗೇರಿ ಗ್ರಾಮದಲ್ಲಿರುವ ಎರಡು ಜಮೀನುಗಳು ನೀರಾವರಿ ಜಮೀನುಗಳು ಇರುತ್ತವೆ. ದಾವಾ ಹಾಕುವ ಕಾಲಕ್ಕೆ ಎರಡು ಜಮೀನುಗಳು ಮಳೆ ಆಶ್ರಿತ ಜಮೀನುಗಳಾಗಿದ್ದವು ಎಂದರೆ ಸಾಕ್ಷಿಯು ಸನ್ 2012 ರಲ್ಲಿಯೇ ನಾನು ಬೋರವೆಲ್ ನ್ನು ಹಾಕಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ಜಮೀನುಗಳ ಪಹಣಿಪತ್ರಿಕೆಗಳಲ್ಲಿ ಖುಷ್ಕಿ ಜಮೀನು ಇದ್ದು, ಜೋಳ, ತೊಗರಿ ಬೆಳೆ ಇರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸನ್ 2011 ರಲ್ಲಿ ಖುಷ್ಕಿ ಜಮೀನುಗಳು ಆಗಿದ್ದವು ಎಂದು ನುಡಿಯುತ್ತಾರೆ. ದಾವಾ ಮಾಡುವ ಕಾಲಕ್ಕೂ ಸಹ ಸದರಿ ಜಮೀನುಗಳು ಮಳೆ ಆಶ್ರಿತ ಜಮೀನುಗಳಾಗಿದ್ದರೂ ಸಹ ನಾನು ನೀರಾವರಿ ಜಮೀನುಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಜಮೀನುಗಳು ಮಳೆ ಆಶ್ರಿತ ಜಮೀನುಗಳಾಗಿದ್ದರಿಂದ ನನಗೆ ಸಾಕಷ್ಟು ಆದಾಯ ಇರಲಿಲ್ಲ ಹಾಗೂ ಕುಟುಂಬದ ಅಡಚಣೆ ಇರುತ್ತಿತ್ತು ಎಂದರೆ ಸರಿಯಲ್ಲ.

ಎರಡು ಜಮೀನುಗಳಲ್ಲಿ ಬೋರಬೆಲ್ ಹಾಕಿಸಿದ್ದು, ಸಾಕಷ್ಟು ನೀರು ಇರುತ್ತದೆ. ನನ್ನ ಮನೆತನಕ್ಕೆ ಯಾವಾಗಲೂ ಹಣಕಾಸಿನ ಅಡಚಣೆ ಇರುತ್ತದೆಂದರೆ ಸರಿಯಲ್ಲ.

ನಮ್ಮ ಊರಿನವರು ಕೊಣ್ಣೂರಿನ ಕೆನರಾ ಬ್ಯಾಂಕಿನಲ್ಲಿ ಸಾಲ ಪಡೆಯುತ್ತಾರೆಂದರೆ ನಿಜ. ನಾನು ಸದರಿ ಬ್ಯಾಂಕಿನಲ್ಲಿ ರೂ. 2,60,000/- ಹಾಗೂ 10,00,000/- ಹಾಗೂ 12,50,000/- ಗಳನ್ನು ನನ್ನ ಜಮೀನುಗಳ ಮೇಲೆ ಸಾಲ ಪಡೆದಿರುತ್ತೇನೆ. ಸದರಿ ಸಾಲಗಳನ್ನು ಮಕ್ಕಳ ಮದುವೆ ಮಾಡಲು ಹಾಗೂ ಊರಿನಲ್ಲಿ ಪಡೆದ ಕೈಗಡ ಸಾಲ ರೂ.12,50,000/-ಗಳನ್ನು ತೀರಿಸಲು ಪಡೆದಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-
(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ